**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,**

**ಸಿದ್ದಾಪುರ**

**ಸಿ.ಸಿ ನಂ. 776/2025**

ಫಿರ್ಯಾದಿಃ ಸೆಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್, ಕಾರವಾರ, ಸಿದ್ದಾಪುರ ಬ್ರಾಂಚ್, ಸಿದ್ದಾಪುರ ಇದರ ಪರವಾಗಿ ಶ್ರೀ ಮಹೇಂದ್ರ ಎ ಎನ್, 33 ವರ್ಷ, ರವೀಂದ್ರ ನಗರ, ಸಿದ್ದಾಪುರ

-ವಿರುದ್ಧ-

ಆರೋಪಿಃ ದೇವರಾಜ್ ಶಿವಾ ನಾಯ್ಕ, 45 ವರ್ಷ, ಉದ್ಯೋಗಃ ವ್ಯಾಪಾರ, ವಾಸಃ ಕೊಪ್ಪ, ಕೊಂಡ್ಲಿ, ಸಿದ್ದಾಪುರ ತಾಲೂಕು, ಉತ್ತರ ಕನ್ನಡ,

**ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ ಕಲಂ 351 ರಡಿ ಆರೋಪಿಯ ಹೇಳಿಕೆ**

**ಪ್ರಶ್ನೆಃ1** ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀಯಾ?

**ಉತ್ತರಃ**

**ಪ್ರಶ್ನೆಃ** 2. **ಫ್ರಾಸಾ-1 ಮಹೇಂದ್ರ ಎನ್ ಎ** ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಸೆಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್ ಸಂಸ್ಥೆಯು ಕರ್ನಾಟಕ ಸೌಹಾರ್ದಾ ಕೋ-ಆಪರೇಟಿವ್ ಕಾಯ್ದೆ ರಡಿಯಲ್ಲಿ ನೊಂದಾಯಿತ ಸಂಸ್ಥೆಯಾಗಿದ್ದು ಹಣಕಾಸು ವ್ಯವಹಾರ, ಅಗತ್ಯವಿರುವವರಿಗೆ ಹಣವನ್ನು ಸಾಲವಾಗಿ ನೀಡುವ ಸೌಹಾರ್ದ ಸಹಕಾರಿ ಸಂಸ್ದೆಯಾಗಿದ್ದು, ಆರೋಪಿತನಾದ ನೀನು ಫಿರ್ಯಾದುದಾರರ ಸಹಕಾರಿ ಸಂಸ್ಥೆಯಲ್ಲಿ ಸಾಲಕ್ಕಾಗಿ ಮನವಿ ಮಾಡಿದ್ದು, ನಂತರ ದಿನಾಂಕ 08.09.2021 ರಂದು ರೂ. 55,000/- ಗಳನ್ನು ಸಾಲ ಪಡೆದಿರುತ್ತಾರೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆ: 3 ಫ್ರಾಸಾ:1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಸಾಲಕ್ಕಾಗಿ ಎಲ್ಲಾ ದಾಖಲಾತಿ ಮತ್ತು ಆಗ್ರಿಮೆಂಟ್ ಮಾಡಿದ್ದು ಹಾಗೂ ಕೃಷ್ಣ ಬಸವಣ್ಣಿ ನಾಯ್ಕ, ನಾಗರಾಜ ನಾರಾಯಣ ನಾಯ್ಕ ಮತ್ತು ಶಿವಾ ಪುಟ್ಟ ನಾಯ್ಕ ರವರನ್ನು ಶ್ಯೂರಟೀಯಾಗಿಸಿದ್ದು, ಆರೋಪಿತ ಮತ್ತು ಶ್ಯೂರಿಟೀಗಳು ಸಾಲದ ಕಂತುಗಳನ್ನು ಸರಿಯಾಗಿ ಪಾವತಿ ಮಾಡದೆ ಇದ್ದು, ಸದರಿ ಸಾಲದ ಈಗಿನ ಬಾಕಿ ಮೊತ್ತವು ರೂ.48,519/-ಆಗಿದ್ದು ಹಾಗೂ ಫಿರ್ಯಾದುದಾರರ ಸಂಸ್ಥೆಯು ಹಲವು ಬಾರಿ ಸಾಲದ ಮರುಪಾವತಿಗಾಗಿ ಬೇಡಿಕೆ ಇಟ್ಟಿದ್ದು, ಸದರಿ ಸಾಲದ ಬಾಬ್ತಿಗಾಗಿ ಆರೋಪಿತನಾದ ನೀನು ದಿನಾಂಕ 14.10.2025 ರಂದು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ,ಸಿದ್ದಾಪುರ ಶಾಖೆಯ ಚೆಕ್ಕಿನ ಸಂಖ್ಯೆ: 074754 ನ ರೂ.48,519/- ನ ಚೆಕನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರ:-**

**ಪ್ರಶ್ನೆ: 4. ಫ್ರಾಸಾ:1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತದನಂತರ ಸಹಕಾರಿ ಸಂಸ್ಥೆಯು ಸದರಿ ಚೆಕನ್ನು ನಗದು ಗೊಳಿಸಲು ಕೆನರಾ ಬ್ಯಾಂಕ್, ಸಿದ್ಧಾಪುರ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿ: 24.10.2025 ರಂದು "**Funds Insufficient**" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ದಿ: 06.11.2025 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸುನ್ನು ಆರೋಪಿತನಾದ ನೀನು ದಿನಾಂಕ 08.11.2025 ರಂದು ಪಡೆದುದಿದ್ದರೂ ಸಹ ಸದರಿ ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷಬಲ್ ಇನ್ಸ್ಟ್ರುಮೆಂಟ್ ಆಕ್ಟ ರ 138** ಅಡಿಯಲ್ಲಿ ಅಫರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರ:-**

**ಪ್ರಶ್ನೆ: 5. ಫ್ರಾಸಾ:1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತಾನು ಈ ಪ್ರಕರಣದಲ್ಲಿ ಪಿರ್ಯಾದಿ ಸೊಸೈಟಿಯ Senior Assistant ಆಗಿದ್ದು, ಈ ದಿನ ಸತ್ಯಾಪನಾ ಹೇಳಿಕೆಯ ಪ್ರಮಾಣ ಪತ್ರವನ್ನು ಪತ್ರ ರೂಪದಲ್ಲಿ ಹಾಜರುಪಡಿಸಿದ್ದೇನೆ ಎಂದು, ಅದರಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯ ಮತ್ತು

ಅದನ್ನು ತಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿ, ಸಹಿ ಮಾಡಿರುತ್ತೇನೆ ಎಂದು, ಆರೋಪಿ ದಿಃ 14-10-2025 ರ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ನ ಚೆಕ್‌ನ್ನು ನಿ.ಪಿ-1 ಎಂದು, ಸದರಿ ನಿ.ಪಿ-1 ರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ-1(ಎ) ಎಂದು, ಸದರಿ ನಿ.ಪಿ- 1ಚೆಕ್ ಅಮಾನ್ಯಗೊಂಡ ಬಗ್ಗೆ ಒಂದು ಬ್ಯಾಂಕ್ ಹಿಂಬರಹವನ್ನು ನಿ.ಪಿ-2 ಎಂದು, ನಿ.ಪಿ-1 ಅಮಾನ್ಯಗೊಂಡ ಬಗ್ಗೆ ದಿಃ 06-11-2025 ರಂದು ಆರೋಪಿಗೆ ನೀಡಿದ ಲೀಗಲ್ ನೋಟೀಸ್ ನ ಕಚೇರಿ ಪ್ರತಿಯನ್ನು ನಿ.ಪಿ-3 ಎಂದು, ಒಂದು ಅಂಚೆ ರಶೀಧಿಯನ್ನು ನಿ.ಪಿ- 4 ಎಂದು, ಸದರಿ ನಿ.ಪಿ- 4 ನೋಟೀಸ ನೊಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟೀಸ್ ಆರೋಪಿಗೆ ನೋಟೀಸ್ ದಿಃ 08-11-2025 ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ನಿ.ಪಿ-5 ಎಂದು, ದಿಃ 24-06-2025 ರ ಅಧಿಕಾರ ಪತ್ರದ ದೃಡಿಕೃತ ಹಾಜರುಪಡಿಸಿದ್ದು ಅದನ್ನು ನಿ.ಪಿ- 6ಎಂದು, ನೊಂದಣಿ ಪ್ರಮಾಣ ಪತ್ರದ ನೋಟರೈಜಡ್ ಪ್ರತಿಯನ್ನು ನಿ.ಪಿ-7 ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 6** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 074754 ನಿಮ್ಮ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಖಾತಾ ನಂ. 89050495082 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 7** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 074754 ಮೇಲಿನ ಸಹಿ ನಿಮ್ಮದೇ ಎಂದು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 8** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 074754 ನ್ನು ಪಿರ್ಯಾದಿ ಸೊಸೈಟಿಗೆ ನೀಡಿರುವುದಾಗಿ ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 9** ಪಿರ್ಯಾದಿ ಸೊಸೈಟಿಯಿಂದ ದಿನಾಂಕ 08.09.2021 ರಂದು ರೂ. 55,000/- ಸಾಲವನ್ನು ಪಡೆದಿರುವಿರಾ?

**ಉತ್ತರಃ**

**ಪ್ರಶ್ನೆಃ 10** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 074754 ದಿನಾಂಕ 14.10.2025 ರಲ್ಲಿ ನಮೂದಿಸಿದ ರೂ. 48,519/- ನ್ನು (ನಲವತ್ತೆಂಟು ಸಾವಿರದ ಐದುನೂರ ಹತ್ತೊಂಬತ್ತು ರೂಪಾಯಿ ಮಾತ್ರ) ಪಿರ್ಯಾದಿ ಸೊಸೈಟಿಗೆ ಪಾವತಿ ಮಾಡುವ ಭಾಧ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

ಪ್ರಶ್ನೆಃ 11 ಈ ಹಂತದಲ್ಲಿ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಚಿಸುವಿರಾ?

**ಉತ್ತರಃ**

ಪ್ರಶ್ನೆಃ 12. ಈ ಪ್ರಕರಣದಲ್ಲಿ ನಿನಗೆ ಇನ್ನು ಏನಾದರೂ ಹೇಳುವುದು ಇದೆಯೇ ?

**ಉತ್ತರಃ**

ಪ್ರಶ್ನೆಃ 13. ನಿನ್ನ ಪರವಾಗಿ ಏನಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುವಿರಾ?

**ಉತ್ತರಃ**

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **03-02-2026** ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ಧಾಪುರ.**